ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ:ಆಯವ್ಯಯ:ಸುತ್ತೋಲೆ:ಸ.ಪ್ರ.ದ.ಕಾ:06:2021-22

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು,ದಿನಾಂಕ:01.12.2021.

ನೆನಪೋಲೆ

## ಸುತ್ತೋಲೆ

ವಿಷಯ: 2006ರ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯಲ್ಲಿ ಹಿಂಬಾಕಿ ಪಾವತಿಸಿರುವ ವಿವರಗಳನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ: 1.ಈ ಕಛೇರಿಯ ಸಮ ಸಂಖ್ಯೆ ಪತ್ರ ದಿನಾಂಕ:15.11.2021.
2.ಸರ್ಕಾರದ ಪತ್ರ ಸಂಖ್ಯೆ:ಇಡಿ:147:ಹೆಚ್ ಪಿಸಿ:2021,ದಿನಾಂಕ:26.11.2021.

*****

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(1)ರ ಪತ್ರದೆಡೆಗೆ ಗಮನ ಸೆಳೆಯಲಾಗಿದೆ.ಸದರಿ ಪತ್ರದಲ್ಲಿ ಕಾಲೇಜು ಶಿಕ್ಷಣ ಇಲಾಖೆ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳು ಹಾಗೂ ಖಾಸಗಿ ಅನುದಾನಿತ ಪದವಿ /ಬಿ.ಎಡ್ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ/ನಿವೃತ್ತಿ ಹೊಂದಿರುವ ಬೋಧಕರುಗಳಿಗೆ ಸಂಬಂಧಿಸಿದಂತೆ ಪ್ರಾಂಶುಪಾಲರುಗಳು/ಜಂಟಿ ನಿರ್ದೇಶಕರುಗಳು ವೈಯಕ್ತಿಕ ಗಮನಹರಿಸಿ ದಿನಾಂಕ 01.01.2006 ರಿಂದ 23.12.2009ರ ಅವಧಿಗೆ ಈಗಾಗಲೇ ಪಾವತಿಸಿರುವ 2006 ಯುಜಿಸಿ ಹಿಂಬಾಕಿ ಮತ್ತು ಸದರಿ ಅವಧಿಗೆ ತುಟ್ಟಿಭತ್ಯೆ ಹೊರತುಪಡಿಸಿ ಪಾವತಿಸಬೇಕಾದ 2006 ಯುಜಿಸಿ ಹಿಂಬಾಕಿಯ ವಿವರಗಳೊಂದಿಗೆ ಸಿಬ್ಬಂದಿವಾರು ಕ್ರೂಢೀಕೃತ ವರದಿಯನ್ನು ವಿಳಂಬಕ್ಕೆ ಆಸ್ಪದವಿಲ್ಲದಂತೆ ದಿನಾಂಕ: 24.11.2021ರ ಒಳಗಾಗಿ ಸಲ್ಲಿಸಲು ಸೂಚಿಸಲಾಗಿತ್ತು.

ಆದರೆ ಇಲ್ಲಿಯವರೆಗೂ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ, ಮೈಸೂರು ಮತ್ತು ಮಂಗಳೂರು ಪ್ರಾದೇಶಿಕ ಕಛೇರಿಗಳಿಂದ ಹಾಗೂ ಕೆಲವು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಂದ ಮಾತ್ರ ಮಾಹಿತಿ ಸ್ವೀಕೃತಗೊಂಡಿರುತ್ತದೆ. ಪ್ರಸ್ತುತ ಉಲ್ಲೇಖ(2)ರ ಸರ್ಕಾರದ ಪತ್ರದಲ್ಲಿ ಒಂದು ವಾರದೊಳಗೆ ಮಾಹಿತಿಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ನಿರ್ದೇಶಿಸಿರುವುದರಿಂದ ಈ ವಿಷಯವನ್ನು ತುರ್ತು ಎಂದು ಬಾವಿಸಿ ಈ ಕೂಡಲೇ ಸಂಬಂಧ ಪಟ್ಟ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರು ಮತ್ತು ಬೆಂಗಳೂರು,ಶಿವಮೊಗ್ಗ,ಧಾರವಾಡ ಮತ್ತು ಕಲಬುರಗಿ ಪ್ರಾದೇಶಿಕ ಜಂಟಿ ನಿರ್ದೇಶಕರುಗಳು ತಮ್ಮ ವೈಯಕ್ತಿಕ ಗಮನಹರಿಸಿ 2006ರ ಯುಜಿಸಿ ಹಿಂಬಾಕಿಯ ವಿವರಗಳೊಂದಿಗೆ ಸಿಬ್ಬಂದಿವಾರು ಕ್ರೂಢೀಕೃತ ವರದಿಯನ್ನು 02 ದಿನಗಳೊಳಗಾಗಿ ಸಲ್ಲಿಸಲು ಮತ್ತೊಮ್ಮೆ ಸೂಚಿಸಲಾಗಿದೆ.

<u>ಅಡಕ</u>: ನಿಗದಿತ ನಮೂನೆ

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:

1.ಇಲಾಖಾ ವ್ಯಾಪ್ತಿಯ ಎಲ್ಲಾ ಜಂಟಿ ನಿರ್ದೇಶಕರುಗಳಿಗೆ/ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ-ಅಗತ್ಯ ಕ್ರಮಕ್ಕಾಗಿ.

2.ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು-ಅಂತರ್ಜಾಲದಲ್ಲಿ ಪ್ರಕಟಿಸಲು ಕೋರಲಾಗಿದೆ.

ನಮೂನೆ

ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು/ಖಾಸಗಿ ಅನುದಾನಿತ ಪದವಿ/ಬಿಎಡ್ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ/ನಿವೃತ್ತಿ ಹೊಂದಿರುವ ಬೋಧಕರು/ತತ್ಸಮಾನ ವೃಂದದವರಿಗೆ ದಿನಾಂಕ: 01.01.2006 ರಿಂದ 23.12.2009ರವರೆಗೆ 2006ರ 6ನೇ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯಂತೆ ತುಟ್ಟಿಭತ್ಯೆ ಹೊರತುಪಡಿಸಿ ಪಾವತಿಸಬೇಕಾಗಿರುವ ಹಿಂಬಾಕಿ ವಿವರ.

| ಕ್ರಮ ಸಂಖ್ಯೆ | ಸಿಬ್ಬಂದಿಯ ಹೆಸರು & ಪದನಾಮ | ಕಾಲೇಜಿನ ಹೆಸರು | 01.01.2006 ರಿಂದ 23.12.2009ರ ವರೆಗೆ ಪಾವತಿಸಿರುವ ಒಟ್ಟು ಹಿಂಬಾಕಿ | 01.01.2006 ರಿಂದ 23.12.2009ರ ವರೆಗೆ ತುಟ್ಟಿಭತ್ಯೆ ಹೊರತು ಪಡಿಸಿ ಪಾವತಿಸಬೇಕಾದ ಒಟ್ಟು ಹಿಂಬಾಕಿ | ಷರಾ (ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ/ನಿವೃತ್ತಿ ಹೊಂದಿರುವ ಬಗ್ಗೆ ಮಾಹಿತಿ ನೀಡುವುದು. |
|---|---|---|---|---|---|
| | | | | | |

d:\manjula2021-22\2006 ugc endorsement.docx